## ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ. ನ್ಯಾಯಾಲಯ ಕುಣಿಗಲ್

## ಸಿ.ಸಿ.1035/2019

| | |
|---|---|
| ಸಾಕ್ಷಿದಾರರ ಹೆಸರು | : ಆರ್.ಮಂಜುನಾಥ್ |
| ತಂದೆಯ ಹೆಸರು | : ಲೇಃ ರಾಮಯ್ಯ |
| ವಯಸ್ಸು | : 52 ವರ್ಷ |
| ಉದ್ಯೋಗ | : ಮುಖ್ಯಪೇದೆ |
| ವಾಸ | : ತುಮಕೂರು |

**ಸಾಕ್ಷಿಯನ್ನು ದಿನಾಂಕ:16.02.2026ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ನಾನು 2016 ರಿಂದ 2021ರವರೆಗೆ ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ 23.07.2019 ರಂದು ಮಧ್ಯಾಹ್ನ 12.30ರ ಸಮಯಕ್ಕೆ ಚಾಸಾ.1 ರವರು ನೀಡಿದ ದೂರನ್ನು ಪಡೆದಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ **ನಿಪಿ.1** ಎಂದು ಮತ್ತು ಅದರಲ್ಲಿರುವ ಸಹಿಯನ್ನು **ನಿಪಿ.1(ಬಿ)** ಎಂದು ಗುರುತಿಸಲಾಗಿದೆ. ಸದರಿ ದೂರನ್ನು ಪಡೆದು ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು, ಅದನ್ನು **ನಿಪಿ.4** ಎಂದು ಮತ್ತು ಅದರಲ್ಲಿರುವ ಸಹಿಯನ್ನು **ನಿಪಿ.4(ಎ)** ಎಂದು ಗುರುತಿಸಲಾಗಿದೆ.

ನಂತರ ಅದೇ ದಿನ ಮಧ್ಯಾಹ್ನ 2.00-3.00 ರವರೆಗೆ ಕೃತ್ಯ ನಡೆದ ಸ್ಥಳವನ್ನು ಚಾಸಾ.1 ರವರ ತಂದೆ ಕುಮಾರ್ ಎಂಬುವವರು ತೋರಿಸಿದ ಮೇರೆಗೆ ಸ್ಥಳ ಪಂಚನಾಮೆಯನ್ನು ಚಾಸಾ.5 ಮತ್ತು ಚಾಸಾ.6 ರವರ ಸಮಕ್ಷಮ ಜರುಗಿಸಿರುತ್ತೇನೆ. ಸದರಿ ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.2 ಎಂದು, ಅದರಲ್ಲಿರುವ ತನ್ನ ಸಹಿಯನ್ನು **ನಿಪಿ.2(ಡಿ)** ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ.1 ಮತ್ತು 2 ರವರ ಹೇಳಿಕಯನ್ನು ಪಡೆದಿರುತ್ತೇನೆ.

ನಂತರ ಅದೇ ದಿನ ಚಾಸಾ.1 ರವರ ಕರ್ತವ್ಯ ನಿರ್ವಹಿಸುತ್ತಿದ್ದ ಬಗ್ಗೆ ಚಾಸಾ.8 ರವರಿಂದ ದೃಢೀಕರಣ ಮತ್ತು ಲಾಗ್ ಶೀಟ್ ದಾಖಲೆಗಳನ್ನು ಪಡೆದಿರುತ್ತೇನೆ. ಸದರಿ ಕರ್ತವ್ಯ ದೃಢೀಕರಣ ಪತ್ರ ಮತ್ತು ತು ಲಾಗ್ ಶೀಟ್‌ಗಳಲ್ಲಿ ನಾನು ಸಹಿ ಮಾಡಿರುತ್ತೇನೆ. ಸದರಿ ಕರ್ತವ್ಯ ದೃಢೀಕರಣ ಪತ್ರ ಮತ್ತು ಲಾಗ್ ಶೀಟ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.5 ಮತ್ತು ನಿಪಿ.6 ಎಂದು, ಅದರಲ್ಲಿರುವ ತನ್ನ ಸಹಿಯನ್ನು **ನಿಪಿ.5(ಎ)** ಮತ್ತು ನಿಪಿ.6(ಎ) ಎಂದು ಗುರುತಿಸಲಾಗಿದೆ.

ದಿನಾಂಕ 12.08.2019 ರಂದು ಚಾಸಾ.3 ಮತ್ತು 4 ರವರ ಹೇಳಿಕಯನ್ನು ಪಡೆದಿರುತ್ತೇನೆ. ನಂತರ ಅದೇ ದಿನ 1 ಮತ್ತು 2 ಆರೋಪಿತರ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ದಿನಾಂಕ 06.09.2019 ರಂದು ಚಾಸಾ.1 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ.7 ರವರಿಂದ ಪಡೆದಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.3 ಎಂದು, ಅದರಲ್ಲಿರುವ ತನ್ನ ಸಹಿಯನ್ನು **ನಿಪಿ.3(ಡಿ)** ಎಂದು ಗುರುತಿಸಲಾಗಿದೆ. ಅದೇ ದಿನ 3 ಮತ್ತು 4 ಆರೋಪಿತರ ವಿರುದ್ಧ Absconding charge sheet ಮತ್ತು ಉಳಿದ ಆರೋಪಿತರ ವಿರುದ್ದ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ವಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಎನ್ ಎ ವಕೀಲರಿಂದಃ**

ನಿಪಿ.1ನ್ನು ಚಾಸಾ.1 ರವರೇ ತಂದಿದ್ದರು. ನಿಪಿ.1ರ ಬರವಣಿಗೆಗೂ ಮತ್ತು ನಿಪಿ.1ರ ಸಹಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಅವರು ತಂದಿದ್ದನ್ನು ತಾನು ಸ್ವೀಕರಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.2 ರ ಪಂಚರಿಗೆ ಮೌಖಿಕವಾಗಿ ತಿಳಿಸಲಾಗಿತ್ತು. ನಿಪಿ.2ರ 4ನೇ ಕಲಂ ಸರಿ ಇರುತ್ತದೆ. ನಿಪಿ.2ರ 4ನೇ ಕಲಂನಲ್ಲಿ ತೋರಿಸಿರುವ ಕುಣಿಗಲ್ ಮೈಸೂರು ರಸ್ತೆ ಸರ್ಕಲ್ ನ ಪೂರ್ವಕ್ಕೆ ಕಲ್ಲು ಕಟ್ಟಡ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಕಲಂ 4ರಲ್ಲಿ ತಪ್ಪಿದ್ದು, ಕಲಂ ನಂ.11ರಲ್ಲಿ ಜಾಗವನ್ನು ಸರಿಯಾಗಿ ತೋರಿಸಲಾಗಿದೆ ಎಂದು ನುಡಿಯುತ್ತಾರೆ. Karnataka Steel ಅಂಗಡಿ ತುಮಕೂರು ರಸ್ತೆಯ ಕಾರ್ನರ್ ಗೆ ಇದೆ ಎಂದರೆ ಸರಿಯಲ್ಲ. Karnataka Steel ಅಂಗಡಿಯ ಮುಂದೆ ಬಸ್ ನಿಲ್ದಾಣ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು, ಪ್ರಯಾಣಿಕರಿದ್ದರೇ ನಿಲ್ಲಿಸುತ್ತಾರೆ ಎಂದು ನುಡಿಯುತ್ತಾರೆ. Karnataka Steel ಅಂಗಡಿಯ ಮುಂಭಾಗದ ರಸ್ತೆ 2019ರಲ್ಲಿ 20 ಅಡಿ ಇತ್ತು. 2019ರಲ್ಲಿ ಒಂದು ಬಸ್ ನಿಂತರೆ ಮತ್ತೊಂದು ಬಸ್ ಹೋಗಲು ಸಾಧ್ಯವಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. Karnataka Steel ಅಂಗಡಿಗೂ ಮತ್ತು ಬಸ್ ನಿಲ್ದಾಣಕ್ಕೆ 2000 ಅಡಿ ಅಂತರವಿದೆ ಎಂದರೆ ಸರಿ. ನಿಪಿ.2ನ್ನು ಠಾಣೆಯಲ್ಲಿ ಬರೆದಿರುತ್ತೇನೆ ಎಂದರೆ ಸರಿಯಲ್ಲ.

2. ನಿಪಿ.2ರ ಕೊನೆಯ ಸಾಲಿನಲ್ಲಿ ವೈಟ್ನರ್ ಬಳಸಿದೆ ಎಂದರೆ ಸರಿ. ನಿಪಿ.5 ಮತ್ತು 6ನ್ನು ಪಡೆಯಲು ನಿವೇದನೆ ಸಲ್ಲಿಸಿರುತ್ತೇನೆ. ಸದರಿ ನಿವೇದನೆಯನ್ನು ನ್ಯಾಯಾಲಯದ ದಾಖಲೆಗೆ ಸಲ್ಲಿಸಿರುವುದಿಲ್ಲ. ಈ ಪ್ರಕರಣದ ಕೇಸ್ ಡೈರಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ.

3. ನಿಪಿ.3ನ್ನು ಪಡೆಯಲು ದಿನಾಂಕ 06.09.2019ಕ್ಕೆ ನೀಡಿದ್ದೆ. ನಿಪಿ.3ನ್ನು ಪಡೆಯಲು ಪಡೆದ ದಿನವೇ ನಿವೇದನೆ ನೀಡಿದ್ದೆ. ಸದರಿ ನಿವೇದನೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಿಪಿ.3ನ್ನು ಚಾಸಾ.1 ರವರಿಗೆ ಅನುಕೂಲವಾಗಲಿ ಎಂದು ಪಡೆದಿಲ್ಲ ಎಂದರೆ ಸರಿಯಲ್ಲ. ದೋಷಾರೋಪಣೆ ಪಟ್ಟಿಯ ಎಲ್ಲಾ ಪುಟಗಳಲ್ಲೂ ಕಲಂ 323 ಅನ್ನು ಹೆಚ್ಚುವರಿಯಾಗಿ ಬರೆಯಲಾಗಿದೆ ಎಂದರೆ ಸರಿ. ಸದರಿ ಕಲಂ 323 ಅನ್ನು ಹೆಚ್ಚುವರಿಯಾಗಿ ಸೇರಿಸಲು ಚಾಸಾ.1 ರವರ ಮರುಹೇಳಿಕೆ ಮಾಡಿಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಯನ್ನು ರವರಿಗೆ ಅನುಕೂಲವಾಗಲಿ ಎಂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ದಸ್ತಗಿರಿ ಮಾಡಲು ಪ್ರತ್ಯೇಕ ನೋಟಿಸ್ ನೀಡಿರಲಿಲ್ಲ. ಚಾಸಾ.1 ರವರಿಂದ ಸುಳ್ಳು ದೂರು ಪಡೆದು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.1 ರವರ ಬಸ್ಸಿನ ಪ್ರಯಾಣಿಕರ ಹೇಳಿಕೆಗಳನ್ನು ದಾಖಲಿಸಿಲ್ಲ. ಎಂ ಎಂ ಟ್ರಾವೆಲ್ಸ್ ನ ಬಸ್ಸಿನ ಪ್ರಯಾಣಿಕರ ಹೇಳಿಕೆಗಳನ್ನು ದಾಖಲಿಸಿಲ್ಲ.

4. Karnataka Steel ಅಂಗಡಿಯ ಅಕ್ಕಪಕ್ಕದ ಅಂಗಡಿಯವರನ್ನು ಅಥವಾ ಸದರಿ ಅಂಗಡಿಗಳ ಗ್ರಾಹಕರ ಸಹಿಗಳನ್ನು ಸ್ಥಳ ಪಂಚನಾಮೆಗೆ ಪಡೆದಿಲ್ಲ. ಆರೋಪಿತರಿಗೂ ಈ ಪ್ರಕರಣಕ್ಕು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ
ಕುಣಿಗಲ್.